# ಭ್ರಷ್ಟಾಚಾರದ ಬಾಗಿಲುಗಳು

**ಕೆ. ಅನಂತರಾಮು**

*(ಹಿಂದಿನ ಸಂಚಿಕೆಯಿಂದ)*

### ಸಪ್ತ ಸಾಮಾಜಿಕ ಪಾಪಗಳು

"ಪಾಪದ ಅರಣ್ಯವನ್ನು ಬೆಳೆಸಲು ಹಿಂಸಾಚಾರವೇ ಬೇಸಾಯದ ಭೂಮಿ. ಗಿಡಮರಗಳನ್ನು ಅಲ್ಲಿ ವ್ಯಾಪಕವಾಗಿ ಹಬ್ಬಿಸಲು ಮಾಡುವ ಕ್ರಿಯಾವಿಶೇಷವೇ ಸುಳ್ಳುಗಾರಿಕೆ. ಕಳ್ಳತನವೇ ಅದಕ್ಕೇ ಹರಿಸುವ ಕಾಲುವೆಯ ನೀರು. ಅನ್ಯಸ್ತ್ರೀಸಂಗವೇ ಅದಕ್ಕೆ ಮಾಡುವ ಕೃಷಿ" ಎಂದು ಮಂಗರಸನೆಂಬ ಕವಿಯು ತನ್ನ 'ಜಯನೃಪ' ಕಾವ್ಯದಲ್ಲಿ ಭ್ರಷ್ಟಾಚಾರದ ಬೆಳವಣಿಗೆಗೊಂದು ರೂಪಕವನ್ನೇ ರಚಿಸಿದ್ದಾನೆ:

**ದುರಿತವನಂ ಬೆಳೆವುದಕೆ ಪೊಲಂ ಕೊಲೆ**
**ಪರಿಕಲಿಸಿದ ನವದೋಹಳವನೃತಂ**
**ಪರಿಕಾಲುದಕಮದಕೆ ಕಳವನ್ಯಸ್ತ್ರೀಸಂಗಮೆಗೆಯ್ಮೆ ।**

ಮಹಾತ್ಮ ಗಾಂಧೀಜಿಯವರು (೧) ತತ್ತ್ವರಹಿತ ರಾಜಕೀಯ (೨) ದುಡಿಮೆಯಿಲ್ಲದ ಸಂಪತ್ತು (೩) ನೀತಿರಹಿತ ವಾಣಿಜ್ಯ (೪) ಶೀಲವಿಲ್ಲದ ಶಿಕ್ಷಣ (೫) ಆತ್ಮಸಾಕ್ಷಿರಹಿತ ಭೋಗ (೬) ಮಾನವತಾಶೂನ್ಯ ವಿಜ್ಞಾನ (೭) ತ್ಯಾಗವಿಲ್ಲದ ಪೂಜೆ – ಇವು 'ಸಪ್ತಸಾಮಾಜಿಕ ಪಾಪ' ಗಳೆಂದು ನಿರೂಪಿಸಿದ್ದಾರೆ. ಇವುಗಳನ್ನು ಭ್ರಷ್ಟಾಚಾರದ ಸಪ್ತಮುಖಗಳೆಂದೇ ಭಾವಿಸಬಹುದಾಗಿದೆ.

### ಅಧ್ಯಯನ ನಡೆಯಬೇಕು

ನಾವು ವಾಸಮಾಡುತ್ತಿರುವ ಪರಿಸರ ಈಗ ಕಲುಷಿತವಾಗಿಬಿಟ್ಟಿದೆ. ಪರ್ವತಗಳು, ಅರಣ್ಯಗಳು ಬೋಳಾಗುತ್ತಿವೆ. ಭೂಮಾತೆಯ ಗರ್ಭವನ್ನು ಕೊರೆದು ನುಗ್ಗುತ್ತಿದ್ದೇವೆ. ಕೆಲವು ನದಿಗಳು ಜೀವ ಕಳೆದುಕೊಂಡರೆ, ಮತ್ತೆ ಕೆಲವು ಚರಂಡಿಗಳಿಗಿಂತ ಕೀಳಾಗಿಬಿಟ್ಟಿವೆ. ಮಿತಿಮೀರಿದ ವಾಹನದಟ್ಟಣೆಯಿಂದಾಗಿ ಉಸಿರುಗಟ್ಟಿಹೋಗುತ್ತಿದೆ. ನಾವು ಕುಡಿಯುವ ನೀರು, ತಿನ್ನುವ ಆಹಾರ, ಉಸಿರಾಡುವ ಗಾಳಿ, ನಡೆದಾಡುವ ನೆಲ, ನೋಡುವ ದೃಶ್ಯಗಳು, ಕೇಳುವ ಮಾತುಗಳು ಎಲ್ಲವೂ ವಿಷಮಯವಾಗಿಬಿಟ್ಟಿವೆ. ಇದೂ ಭ್ರಷ್ಟಾಚಾರದ ಫಲಿತಾಂಶಗಳೇ ಆಗಿದೆ. ಹೀಗೆ ಪರಿಸರವು ಸಂಪೂರ್ಣವಾಗಿ ನಾಶವಾದ ಮೇಲೆ ಅದನ್ನು ರಕ್ಷಿಸಬೇಕೆಂದು ಕಳವಳಿಸುತ್ತಿದ್ದೇವೆ. 'ಕೆಟ್ಟ ಮೇಲೆ ಬುದ್ಧಿ ಬಂತು, ಅಟ್ಟ ಮೇಲೆ ಒಲೆ ಉರಿಯಿತು' ಎಂಬ ಗಾದೆಯಂತೆ ಈಗ 'ಪರಿಸರವಿಜ್ಞಾನ' ಎಂಬ ಹೆಸರಿನಲ್ಲಿ ಪರಿಸರಮಾಲಿನ್ಯಕ್ಕೆ ಕಾರಣಗಳು, ನಿವಾರಣೋಪಾಯಗಳು ಮೊದಲಾದುವನ್ನೆಲ್ಲ ಶಾಲೆಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿದ್ದೇವೆ. ಹಾಗೆಯೇ ಭ್ರಷ್ಟಾಚಾರವೂ ಈಗ ಬ್ರಹ್ಮರಾಕ್ಷಸವಾಗಿ ಬೆಳೆದು, ನಮ್ಮ ಅಂತಃಸತ್ವವನ್ನೇ ತೋಡಿ ತಿನ್ನುತ್ತಿರುವುದರಿಂದ, ಅದಕ್ಕೂ ಅಧ್ಯಯನಕಾಲ ಒದಗಿಬಂದಿದೆ. ಭ್ರಷ್ಟಾಚಾರದ ಉಗಮ, ವಿಕಾಸ, ವ್ಯಾಪ್ತಿ, ಕಾರಣಗಳು, ಉಲ್ಬಣಿಕೆ, ಪರಿಣಾಮಗಳು, ನಿಯಂತ್ರಣೋಪಾಯಗಳು ಮುಂತಾದುವುಗಳನ್ನು ಸಾಂಗವಾಗಿ ಅಧ್ಯಯನ ಮಾಡಲು ಇದು ಸಕಾಲವಾಗಿದೆ. 'ಅಪರಾಧಶಾಸ್ತ್ರ'ವೆಂಬ ಹೆಸರಿನಲ್ಲಿ ಸ್ವಲ್ಪ ಅಧ್ಯಯನ ನಡೆಯುತ್ತಿದ್ದರೂ ಅದರ ವ್ಯಾಪ್ತಿ ವಿಸ್ತಾರಗೊಳ್ಳಬೇಕಾಗಿದೆ. ಭ್ರಷ್ಟಾಚಾರವು ಶಾಲೆಕಾಲೇಜುಗಳಲ್ಲಿ ಪರೀಕ್ಷಾಧ್ಯಯನದ ವಿಷಯವಾಗಿ, ಅದರೊಡನೆ ನೀತಿಶಿಕ್ಷಣವನ್ನೂ ಬೆಸೆಯಬೇಕಾಗಿದೆ.

ಎಲ್ಲರೂ ಕ್ರಿಯಾಶೀಲರಾಗಬೇಕು; ಭ್ರಷ್ಟಾಚಾರವನ್ನು ಹತ್ತಿಕ್ಕುವಲ್ಲಿ ಪೊಲೀಸ್‌ಪಡೆಯನ್ನು ರಾಜಕೀಯದ ಹಸ್ತಕ್ಷೇಪವಿರದಂತೆ ಚುರುಕುಗೊಳಿಸಬೇಕು. ಸಾರ್ವಜನಿಕರು ಪೊಲೀಸರಿಗೆ ನೆರವಾಗಬೇಕು. ಭ್ರಷ್ಟಾಚಾರಿಗಳು ತಮ್ಮ ತಪ್ಪಿಗೆ ತಕ್ಕ ಶಿಕ್ಷೆ ಅನುಭವಿಸುತ್ತಾರೆ ಎಂಬ ಸಮಾಧಾನ ಸಾರ್ವಜನಿಕರಲ್ಲಿ ಮೂಡುವಂತೆ ನ್ಯಾಯಾಲಯದ ಕಟ್ಟಳೆಗಳು ಎಳೆದಾಡದೆ ಬೇಗ ಬೇಗನೆ ಜರುಗಬೇಕು. ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರವನ್ನೂ, ಸ್ಥಾನಮಾನಗಳನ್ನೂ ನೀಡಬೇಕು. ಪ್ರಸಾರಮಾಧ್ಯಮಗಳು ಭ್ರಷ್ಟಾಚಾರವನ್ನು ನಿರ್ಭಯವಾಗಿ ಬಯಲಿಗೆಳೆಯಬೇಕು. ಪ್ರತಿಪಕ್ಷಗಳು ಈ ದಿಕ್ಕಿನಲ್ಲಿ ಕ್ರಿಯಾಶೀಲವಾಗಿರಬೇಕು.

### ಕುಮಾರವ್ಯಾಸನ ಹನ್ನೆರಡು ಸೂತ್ರಗಳು

ಭ್ರಷ್ಟಾಚಾರದ ನಿಯಂತ್ರಣದಲ್ಲಿ ವ್ಯಕ್ತಿಗತವಾದ ಶೀಲಸಂವರ್ಧನೆ ಹೇಗಾಗಬೇಕೆಂಬುದಕ್ಕೆ ಕುಮಾರವ್ಯಾಸನು (ಅರಣ್ಯಕಾಂಡ: ೧೫–೧೫) ಹನ್ನೆರಡು ಸೂತ್ರಗಳನ್ನು ಕೊಟ್ಟಿದ್ದಾನೆ:

**ಸಾಂಗ ವೇದಾಧ್ಯಯನ ಸಜ್ಜನ**
**ಸಂಗ ಶಾಸ್ತ್ರಶ್ರವಣ ತೃಷ್ಣಾ**
**ಭಂಗ ಯಜನಧ್ಯಾನ ಮೌನವ್ರತ ಸದಾಚಾರ ।**
**ಮಾಂಗಲಿಕ ಕರ್ಮಾಭಿಯೋಗ ಕು**
**ಲಾಂಗನಾ ರತಿಯಾತ್ಮಚಿಂತೆ ಪ**
**ರಾಂಗನಾ ವೈಮುಖ್ಯವಿವು ಸದ್ಧರ್ಮ ಗತಿಯೆಂದ ॥**

(೧) ಶಿಕ್ಷಾ, ಕಲ್ಪ, ನಿರುಕ್ತ, ವ್ಯಾಕರಣ, ಛಂದಸ್ಸು, ಜ್ಯೋತಿಷ ಎಂಬ ವೇದಾಂಗಗಳ ಸಹಿತವಾಗಿ ವೇದಾಧ್ಯಯನ ಮಾಡಬೇಕು (ಇಂದಿನ ಕಾಲದ ಸೌಕರ್ಯಕ್ಕೆ ತಕ್ಕಂತೆ ಸದ್ಗ್ರಂಥಗಳ ಅಧ್ಯಯನ). (೨) ಸತ್ಪುರುಷರ ಸಹವಾಸದಲ್ಲಿರಬೇಕು. (೩) ನಮ್ಮನ್ನು ಸನ್ಮಾರ್ಗಕ್ಕೆ ಹಚ್ಚುವ ಶಾಸ್ತ್ರವಿಚಾರಗಳನ್ನು, ಪ್ರವಚನಗಳನ್ನು ಶ್ರವಣಮಾಡಬೇಕು. (೪) ಅನಗತ್ಯವಾದ ಬಯಕೆಗಳನ್ನು ಮೆಟ್ಟಬೇಕು. (೫) ದೇವಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸಬೇಕು. (೬) ಅರಿಯದೆ ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡಬೇಕು. (೭) 'ಮಾತು ಬೆಳ್ಳಿ, ಮೌನ ಬಂಗಾರ'ವಾಗಿರುವುದರಿಂದ, ಹಿತಮಿತವಾಗಿ ಮಾತನಾಡುತ್ತ, ಮೌನವಾಗಿರುವುದನ್ನು ವ್ರತವಾಗಿ ರೂಢಿಸಿಕೊಳ್ಳಬೇಕು. ಮಾತು ವ್ರತವಲ್ಲ, ಮೌನವೇ ವ್ರತ. (೮) ಸದಾಚಾರಸಂಪನ್ನರಾಗಿರಬೇಕು. (೯) ಮಂಗಳಕರವಾದ ಸಮಾಜಸೇವಾಕಾರ್ಯಗಳಲ್ಲಿ ತತ್ಪರರಾಗಬೇಕು. (೧೦) ತನ್ನ ಧರ್ಮಪತ್ನಿಯಲ್ಲಿ ಮಾತ್ರವೇ ಅನುರಕ್ತನಾಗಿರಬೇಕು.

(೧೧) ಪರಸ್ತ್ರೀ ವಿಷಯದಲ್ಲಿ ವಿಮುಖನಾಗಬೇಕು. (೧೨) ಈ ದೇಹ ನಾನಲ್ಲ, ನಾನು ಆತ್ಮಸ್ವರೂಪನಾಗಿದ್ದೇನೆ ಎಂಬ ವೇದಾಂತಚಿಂತನೆಯಲ್ಲಿ ತೊಡಗಬೇಕು. ಇದೇ ಸದ್ಧರ್ಮದ ಮಾರ್ಗ, ಭ್ರಷ್ಟಾಚಾರದಿಂದ ಮುಕ್ತವಾಗುವ ಶಿಷ್ಟ ಮಾರ್ಗ.

**ಯುವಶಕ್ತಿಯ ಹೊಣೆಗಾರಿಕೆ**

ಭಾರತದ ಯುವಶಕ್ತಿ ಅದಮ್ಯವಾದುದು, ಅಪಾರವಾದುದು. ಅದಕ್ಕೆ ಸೂಕ್ತವಾದ ಮಾರ್ಗದರ್ಶನ, ಮೇಲ್ಪಂಕ್ತಿ ಲಭ್ಯವಾದರೆ, ಅದು ಸ್ವರ್ಗವನ್ನೇ ಭೂಮಿಗಿಳಿದು ತರುತ್ತದೆ; ರಾಮರಾಜ್ಯದ ಕನಸನ್ನು ನನಸಾಗಿಸುತ್ತದೆ. ಆದರೆ ಸಮಕಾಲೀನ ಭ್ರಷ್ಟಾಚಾರದ ಪ್ರವಾಹದಲ್ಲಿ ಅದೂ ಕೊಚ್ಚಿಹೋಗುತ್ತಿದೆ. ತನ್ನ ಕಾಲಮೇಲೆ ತಾನು ನಿಲ್ಲುವ ಹೊತ್ತಿಗೆ, ಭ್ರಷ್ಟಾಚಾರಕ್ಕೇ ತನ್ನನ್ನು ಸಮರ್ಪಿಸಿಕೊಂಡುಬಿಡುತ್ತಿದೆ; ಶ್ರಮರಹಿತ ಜೀವನ, ಭೋಗಜೀವನ, ದ್ರವ್ಯಸಂಗ್ರಹಜೀವನಕ್ಕೆ ಮರುಳಾಗಿಬಿಡುತ್ತಿದೆ. **"ಲಂಚದ ಹಣ ನನಗೆ ಬೇಡ, ಅಕ್ರಮವಾದ ಸಂಪತ್ತು ನನಗೆ ಬೇಡ, ಐಷಾರಾಮಿ ಜೀವನ ನನಗೆ ಬೇಡ, ನಾನು ಯಾರಿಗೂ ದಾಸನಾಗುವುದಿಲ್ಲ, ನಾನು ಯಾರನ್ನೂ ದಾಸನನ್ನಾಗಿ ಮಾಡಿಕೊಳ್ಳುವುದಿಲ್ಲ; ಈ ರಾಷ್ಟ್ರವನ್ನು ನಾನು ಮನಸಾರೆ ಪ್ರೀತಿಸುತ್ತೇನೆ"** ಎಂಬ ದೃಢಸಂಕಲ್ಪದಿಂದ ಮೈಕೊಡವಿಕೊಂಡು ಯುವಜನತೆ ಮೇಲೇಳಬೇಕಾಗಿದೆ.

ಯುವಶಕ್ತಿಯು ಹಲವು ಮಹಿಮೆಗಳಿಗೆ ಸಂಕೇತ: ಯುವಶಕ್ತಿಯೆಂದರೆ ಅದು ಚೈತನ್ಯಕ್ಕೆ ಸಂಕೇತ; ಅದು ಭ್ರಷ್ಟಾಚಾರದ ಪ್ರವಾಹಕ್ಕೆ ಎದುರಾಗಿ ಈಜಿ ಗೆಲ್ಲಬೇಕಾಗಿದೆ. ಯುವಶಕ್ತಿಯೆಂದರೆ ಅದು ನಾಯಕತ್ವಕ್ಕೆ ಸಂಕೇತ; ಭ್ರಷ್ಟಾಚಾರಮುಕ್ತ ಸಮಾಜವನ್ನು ಕಟ್ಟುವ ತೇಜಸ್ವೀ ನಾಯಕರು ರೂಪುಗೊಳ್ಳಬೇಕಾಗಿದೆ. ಯುವಶಕ್ತಿಯೆಂದರೆ ಅದು ಕಾರ್ಯಶೀಲತೆಗೆ ಸಂಕೇತ; ಸೋಮಾರಿಯೆಂಬ ಮಾರಿಯ ಹಿಡಿತದಿಂದ ಬಿಡುಗಡೆಗೊಂಡು ಕಾರ್ಯದಕ್ಷರಾಗಿ ಹೊಮ್ಮಿಬರಬೇಕಾಗಿದೆ. ಯುವಶಕ್ತಿಯೆಂದರೆ ಅದು ಸಂಘಟನೆಗೆ ಸಂಕೇತ; ಸಮಾನಮನಸ್ಕರನ್ನು ಒಗ್ಗೂಡಿಸಿಕೊಂಡು, ಅದು ಅಹಿಂಸಾತ್ಮಕ ಹೋರಾಟಕ್ಕೆ ಅಣಿಯಾಗಬೇಕಾಗಿದೆ. ಯುವಶಕ್ತಿಯೆಂದರೆ ಅದು ಸಮರ್ಪಣೆಗೆ ಸಂಕೇತ; ತಾನು, ತನ್ನದು ಎಂಬ ಸ್ವಾರ್ಥವಲಯದಿಂದ ಮುಕ್ತಗೊಂಡು ರಾಷ್ಟ್ರನಿರ್ಮಾಣದ ಕಾರ್ಯಕ್ಕೆ ಅದು ತನ್ನನ್ನು ತಾನು ಸಮರ್ಪಿಸಿಕೊಳ್ಳಬೇಕಾಗಿದೆ.

ಯುವಶಕ್ತಿಯೆಂದರೆ ಅದು ರಾಷ್ಟ್ರದ ಅಭಿವೃದ್ಧಿಯ ಸಂಕೇತ; ರಾಷ್ಟ್ರದ ಅಭಿವೃದ್ಧಿಯಲ್ಲಿಯೇ ತನ್ನ ಅಭಿವೃದ್ಧಿಯೂ ಅಡಗಿದೆ ಎಂಬುದನ್ನು ಅದು ಮನದಟ್ಟು ಮಾಡಿಕೊಳ್ಳಬೇಕಾಗಿದೆ. ಯುವಶಕ್ತಿಯೆಂದರೆ ಅದು ಸಾಂಸ್ಕೃತಿಕ ಪುರೋಭಿವೃದ್ಧಿಯ ಸಂಕೇತ; ಧರ್ಮ–ಸಂಸ್ಕೃತಿ–ಭಾಷೆ–ಸಾಹಿತ್ಯ–ಕಲೆ–ಆಚಾರ–ವಿಚಾರ–ನಂಬಿಕೆ–ನಡೆವಳಿಕೆಗಳು ಮುಕ್ಕಾಗದಂತೆ ಕಾಪಾಡುತ್ತ, ಮುಂದಿನ ಪೀಳಿಗೆಗೆ ಆ ಮೌಲ್ಯಗಳನ್ನು ವರ್ಗಾಯಿಸಬೇಕಾಗಿದೆ. ಯುವಶಕ್ತಿಯೆಂದರೆ ಅದು ಪ್ರೇಮಕ್ಕೆ ಸಂಕೇತ; ವಿವಾಹಪೂರ್ವ ಲೈಂಗಿಕತೆ, ಉನ್ಮಾದ, ಚೆಲ್ಲಾಟಗಳಿಗೆ ತುತ್ತಾಗದೆ ನಿರ್ಮಲವಾದ ಗೃಹಸ್ಥಾಶ್ರಮದ ಪವಿತ್ರಮಾರ್ಗದಲ್ಲಿ ಅದು ಸಾಗಬೇಕಾಗಿದೆ. ಯುವಶಕ್ತಿಯೆಂದರೆ ಅದು ಸೃಷ್ಟಿಕಾರ್ಯದ ಸಂಕೇತ; ಸತ್ಪ್ರಜೆಯಾಗಿ ತಾನು ಬಾಳುತ್ತ, ಸತ್ಪ್ರಜೆಗಳನ್ನು ಸೃಷ್ಟಿಮಾಡುವ ಗುರುತರ ಜವಾಬ್ದಾರಿ ಅದರ ಮೇಲಿದೆ. ಸ್ವರ್ಗದ ಬಾಗಿಲುಗಳು ವರ್ಷದಲ್ಲಿ ಆರು ತಿಂಗಳು ಮಾತ್ರವೇ ತೆರೆದಿರುತ್ತವೆಯಂತೆ, ಆದರೆ ನರಕದ ಬಾಗಿಲುಗಳು ಹಾಗಲ್ಲ, ಸದಾಕಾಲ ತೆರೆದಿರುತ್ತವೆ. ಯುವಶಕ್ತಿಯು ತನ್ನ ತ್ಯಾಗಶೀಲತೆಯಿಂದ ಭ್ರಷ್ಟಾಚಾರದ ಬಾಗಿಲುಗಳನ್ನು ಮುಚ್ಚಿಸಿದರೆ, ಅದು ಆಗ ನರಕದ ಬಾಗಿಲುಗಳನ್ನೂ ಆರಾರು ತಿಂಗಳು ಮುಚ್ಚಿಸಬಲ್ಲದು.

**ಬಸವಣ್ಣನವರ ಒಂದು ವಚನ**

ಬಸವಣ್ಣನವರ ಅತ್ಯಂತ ಬೋಧಪ್ರದವಾದ ಒಂದು ವಚನದ ಮೂಲಕ ಪ್ರಸ್ತುತ ವಿಚಾರವನ್ನು ಮುಕ್ತಾಯಗೊಳಿಸುತ್ತೇನೆ. ಅಕ್ಕಸಾಲಿಯು ಇದು ಚೊಕ್ಕ ಚಿನ್ನವೇ ಎಂದು ಪರೀಕ್ಷಿಸಲು ಅದನ್ನು ಒರೆಗಲ್ಲಿನ ಮೇಲೊಮ್ಮೆ ಗೀಚುತ್ತಾನೆ. ಒಂದು ತುಣುಕು ಚಿನ್ನ ಆ ಗೀಚಿನಲ್ಲಿರುತ್ತದೆ. "ರಾಶಿ ರಾಶಿ ಚಿನ್ನವಿರಬಹುದು, ಆದರೆ ಒಂದು ಗೀಚಿನಷ್ಟು ಚಿನ್ನವನ್ನೂ 'ಇದು ನನಗಿರಲಿ' ಎಂದು ನಾನು ಇಟ್ಟುಕೊಳ್ಳುವವನಲ್ಲ. ರಾಶಿ ರಾಶಿ ದವಸಧಾನ್ಯಗಳಿರಬಹುದು, ಆದರೆ ಅವುಗಳಿಂದ ಒಂದೇ ಒಂದು ಕಾಳನ್ನೂ 'ಇದು ನನಗಿರಲಿ' ಎಂದು ನಾನು ಎತ್ತಿಟ್ಟುಕೊಳ್ಳುವವನಲ್ಲ. ಹೇ ಕೂಡಲಸಂಗಮದೇವಾ, ನಿಮ್ಮಾಣೆಯಾಗಿ, ನಿಮ್ಮ ಪುರಾತನ ಭಕ್ತರ ಆಣೆಯಾಗಿ (ಶಿವಭಕ್ತರಲ್ಲಿ ಪುರಾತನರು, ನೂತನರು ಎಂಬ ಎರಡು ಕಾಲದವರಿದ್ದಾರೆ) ಇಂದಿಗೂ ಬೇಡ, ನಾಳೆಗೂ ಬೇಡ. ಅದನ್ನು ನಾನು ಭಕ್ತಸಮಾಜಕ್ಕೇ ಒಪ್ಪಿಸುತ್ತೇನೆ, ಲೋಕಹಿತಕ್ಕೇ ಸಮರ್ಪಿಸುತ್ತೇನೆ" ಎಂಬುದಿಲ್ಲಿ ಬಸವಣ್ಣನವರ ನಿಲುವಾಗಿದೆ. ಇದು ಅಪರಿಗ್ರಹದ ಪರಾಕಾಷ್ಠೆ, ಲೋಕಾರ್ಪಣದ ಪರಾಕಾಷ್ಠೆ. ಭ್ರಷ್ಟಾಚಾರದ ನಿಯಂತ್ರಣಕ್ಕೆ ಇಂತಹ ನಿಲುವಲ್ಲದೆ ನಮಗೆ ಬೇರೇನು ಬೇಕಾಗಿದೆ!

**ಪರಮಹಂಸರ ವಾಣಿ**

'ಗೀತಾ', 'ಗೀತಾ', 'ಗೀತಾ' ಎಂದು ಒಂದೇ ಸಮನೆ ಹೇಳುತ್ತಿದ್ದರೆ, ಅದು 'ತಾಗೀ', 'ತಾಗೀ', 'ತಾಗೀ' (ಬಂಗಾಳಿ ಭಾಷೆಯಲ್ಲಿ ತಾಗೀ ಎಂದರೆ ತ್ಯಾಗ ಎಂದರ್ಥ) ಎಂದಾಗುತ್ತದೆ. ಇಡೀ ಭಗವದ್ಗೀತೆಯ ಸಂದೇಶವೇ 'ತ್ಯಾಗ' ಎಂಬ ಒಂದೇ ಒಂದು ಮಾತಿನಲ್ಲಿ ತುಂಬಿ ತುಳುಕುತ್ತಿದೆಯೆಂದು ಶ್ರೀರಾಮಕೃಷ್ಣ ಪರಮಹಂಸರು ಹೇಳಿರುವ ಉಪದೇಶವಾಣಿಯನ್ನೂ ಈ ಹೊತ್ತಿನಲ್ಲಿ ನೆನೆಯಬೇಕು. ತ್ಯಾಗದಿಂದಲ್ಲದೆ ಅಮೃತತ್ವವಿಲ್ಲ; ತ್ಯಾಗದಿಂದಲ್ಲದೆ ಭ್ರಷ್ಟಾಚಾರಮುಕ್ತ ರಾಷ್ಟ್ರನಿರ್ಮಾಣವು ಸಾಧ್ಯವಿಲ್ಲ.

**ಬೇಕು ಬೇಕು ಎಂಬುದೇ ಭ್ರಷ್ಟಾಚಾರ**
**ಸಾಕು ಸಾಕು ಎಂಬುದೇ ಸದಾಚಾರ ।**

★

ವಿವೇಕಪ್ರಭದ ಎಲ್ಲಾ ಸಂಚಿಕೆಗಳನ್ನೂ ಇಂಟರ್‌ನೆಟ್‌ನಲ್ಲಿ ಓದಬಹುದು. ಅದಲ್ಲದೆ, ಲೇಖಕರು, ಶೀರ್ಷಿಕೆ, ವರ್ಷ ತಿಂಗಳುಗಳ ಆಧಾರದ ಮೇಲೆ ನಿಮಗೆ ಬೇಕಾದ ಲೇಖ